ದಿನಾಂಕಃ **19.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ.ಸಿ.ಎಲ್ ಅರ್ಜಿದಾರರ ಪರ ವಕೀಲರಿಂದ**

| | |
|---|---|
| ನಿ.ಪಿ. **19** | ಅರ್ಜಿದಾರ **1**(ಎ) ರವರ ಆಧಾರ್ ಕಾರ್ಡ್ ನ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**20** | ಅರ್ಜಿದಾರ **1** (ಎ) ರವರ ಪಾನ್ ಕಾರ್ಡ್ ನ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ. **21** | ಅರ್ಜಿದಾರ **1** (ಎ) ರವರ ಪಾಸ್ ಬುಕ್ ನ ಮುಖ ಪುಟದ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**22** | ಅರ್ಜಿದಾರ **1** (ಬಿ) ರವರ ಪಾಸ್‌ಬುಕ್ ನ ಮುಖ ಪುಟದ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**23** | ಅರ್ಜಿದಾರ **1** (ಬಿ) ರವರ **10** ನೇ ತರಗತಿಯ ಅಂಕಪಟ್ಟಿಯ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**24** | ನನ್ನ ಪಾನ್ ಕಾರ್ಡ್ ನ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**25** | ನನ್ನ ಪಾಸ್ ಪುಸ್ತಕದ ಮುಖ ಪುಟದ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ. **26** | ಆಗಸ್ಟ್ **2023** ರ ಪೇ ಸ್ಲಿಪ್ |

| | |
|---|---|
| ನಿ.ಪಿ. **27** | ಆರ್.ಸಿ. ಯ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**28** | ಚಾಲನಾ ಪರವಾನಗಿಯ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ. **29** | ಮೃತ ರೇಖಾರವರ **10** ನೇ ತರಗತಿಯ ಅಂಕಪಟ್ಟಿಯ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ. **30** ರಿಂದ **33** | 4 Discharge summary |
| ನಿ.ಪಿ.**34** | ಅರ್ಜಿದಾರ **1** (ಎ) ರವರ **10** ನೇ ತರಗತಿಯ ಅಂಕಪಟ್ಟಿಯ ನೋಟರೈಸ್ಡ್ ಪ್ರತಿ (ಮೂಲ ದಾಖಲೆಯನ್ನು ನೋಡಿ ವಾಪಸ್ ನೀಡಲಾಯಿತು) |
| ನಿ.ಪಿ.**35** | **156** ವೈದ್ಯಕೀಯ ಚೀಟಿಗಳು |
| ನಿ.ಪಿ.**36** | **22** ಮೆಡಿಕಲ್ ಬಿಲ್ಲುಗಳು ( ರೂ. **11,12,359/**) |
| ನಿ.ಪಿ.**37** | ಒಂದು C.T. Scan ವರದಿ |
| ನಿ.ಪಿ.**38 & 39** | ಎರಡು ರೇಡಿಯೋಲಜಿ ವರದಿ |

ಆದ್ದರಿಂದ ಅರ್ಜಿಯನ್ನು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಹೆಚ್.ಕೆ.ಆರ್ ವಕೀಲರಿಂದ**

ನಾನು ಈ ಅಪಘಾತವನ್ನು ನೋಡಿಲ್ಲ. ಈ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಹೇಳಿಕೆ ಅಥವಾ ದೂರನ್ನು ನೀಡಿಲ್ಲ, ಮೂಲ ಅರ್ಜಿದಾರರಾದ ರೇಖಾರವರು ನನಗೆ

ಮಗಳಾಗಬೇಕು. ಮೋಟಾರ್ ಸೈಕಲ್ ಸಂಖ್ಯೆ ಕೆಎ.06.ಇಡಬ್ಲ್ಯೂ9995 ರಲ್ಲಿ 3 ಜನರು ಹೋಗುತ್ತಿದ್ದರು. ಆ ಮೂರು ಜನರು ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಮೋಟಾರ್ ಸೈಕಲ್ ಸವಾರ ಆ ಮೊದಲು ಪರಿಚಯ ಇರಲಿಲ್ಲಾ. ಮೋಟಾರ್ ಸೈಕಲ್ ಸವಾರ ಒಬ್ಬರೆ ಹೆಲ್ಮೆಟ್ ಧರಿಸಿದ್ದರು. ಇನ್ನುಳಿದಂತೆ ರತ್ನಮ್ಮ ಮತ್ತು ರೇಖಾರವರು ಹೆಲ್ಮೆಟ್ ಧರಿಸಿರಲಿಲ್ಲಾ ಎಂದರೆ ಸರಿ. ರೇಖಾರವರಿಗೆ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿತ್ತು ಎಂದರೆ ಸರಿ. ಒಂದು ವೇಳೆ ರೇಖಾರವರು ಹೆಲ್ಮೆಟ್ ಅನ್ನು ಧರಿಸಿದ್ದರೆ ಅವರ ತಲೆಗೆ ಅದಂತಹ ಗಾಯವನ್ನು ತಪ್ಪಿಸ ಬಹುದಾಗಿತ್ತು ಎಂದರೆ ಸರಿ. ಅಪಘಾತವಾದ ಸ್ಥಳವನ್ನು ನಾನು ನೋಡಿರುತ್ತೇನೆ. ಸದರಿ ರಸ್ತೆ ಸಿಂಗಲ್ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಮಧ್ಯ ಭಾಗದಲ್ಲಿ ಡಿವೈಡರ್ ಇರುವುದಿಲ್ಲ ಎಂದರೆ ಸರಿ. ಅಪಘಾತ ರಸ್ತೆಯ ಬಲಭಾಗಕ್ಕೆ ಆಗಿರುತ್ತದೆ ಎಂದರೆ ಸರಿ. ರಸ್ತೆಯ ಬಲಭಾಗಕ್ಕೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಎಡಭಾಗಕ್ಕೆ ಆಗಿರುತ್ತದೆ. ಇನ್ನೊಂದು ಮೋಟಾರ್ ಸೈಕಲ್ ಬಂದು ಡಿಕ್ಕಿ ಹೊಡೆದಿದ್ದು ಆ ಮೋಟಾರ್ ಸೈಕಲ್ ಅನ್ನು ನಾನು ನೋಡಿರುವುದಿಲ್ಲ. ಈ ಅಪಘಾತ ಮುಖಾಮುಖಿ ಆಗಿರುತ್ತದೆ. ಇನ್ನೂಂದು ಮೋಟಾರ್ ಸೈಕಲ್ ಸವಾರನಿಗೆ ಸ್ವಲ್ಪ ಗಾಯಗಳಾಗಿರುತ್ತದೆ. ಇನ್ನೊಂದು ಮೋಟಾರ್ ಸೈಕಲ್ ನಲ್ಲೂ ಸಹ 3 ಜನರು ಇದ್ದರು. ನನ್ನ ಮಗಳು ಹೋಗುತ್ತಿದ್ದ ಮೋಟಾರ್ ಸೈಕಲ್‌ನ ಮಾಲೀಕರು ಯಾರು ಮತ್ತು ಚಾಲನಾ ಪರವಾನಗಿಯನ್ನು ನೋಡಿರುವುದಿಲ್ಲ. ಈ ಅಪಘಾತಕ್ಕೆ ನನ್ನ ಮಗಳು ಹೋಗುತ್ತಿದ್ದ ಮೋಟಾರ್ ಸೈಕಲ್

ಸವಾರನ ತಪ್ಪು ಸಹ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮಗಳು ಹೋಗುತ್ತಿದ್ದ ಮೋಟಾರ್ ಸೈಕಲ್ ಸವಾರನ ಸವಾರ ಹೆಲ್ಮೆಟ್ ಧರಿಸದೇ ಒಟ್ಟು 3 ಜನರನ್ನು ಕರೆದುಕೊಂಡು ಹೋಗಿ ನಿಯಂತ್ರಣ ತಪ್ಪಿ ಅವರೇ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು ಹೋಗುತ್ತಿದ್ದ ಮೋಟಾರ್ ಸೈಕಲ್‌ಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ಇನ್ನೊಂದು ಮೋಟಾರ್ ಸೈಕಲ್ ಸಂಖ್ಯೆ ಕೆಎ.52.ಎಸ್.1637 ರ ವಿರುದ್ದ ಸುಳ್ಳು ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 30.9.2023 ರಿಂದ 6.7.2024 ರವರೆಗೆ ನನ್ನ ಮಗಳು ಯಾವುದಾದರೂ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನನ್ನ ಮಗಳು ಅಪಘಾತದಿಂದ ಆದ ಗಾಯಗಳಿಂದಲೇ ಮೃತಪಟ್ಟಿರುವುದಾಗಿ ವೈದ್ಯರ ಸಾಕ್ಷಿಯನ್ನು ಮಾಡಿಸಬಹುದು. ನಾನು ಹಾಜರು ಮಾಡಿರುವ ಪಿ.ಎಂ. ವರದಿಯ ಆಧಾರದ ಮೇರೆಗೆ ನನ್ನ ಮಗಳ ಸಾವಿಗೂ ಮತ್ತು ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳಾಗಿರಲಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗಳ ವೈದ್ಯಕೀಯ ಖರ್ಚಿಗೆ 20 ಲಕ್ಷ ಖರ್ಚಾಗಿದ್ದು, ಆ ಹಣವನ್ನು ಸೀನಪ್ಪ ಎನ್ನುವವರು ನಮ್ಮ ಜಮೀನನ್ನು ಖರೀದಿ ಮಾಡಿ ಹಣ ನೀಡಿರುತ್ತಾರೆ. ನಾನು ಆಸ್ಪತ್ರೆಯ ಬಿಲ್ಲಿಂಗ್ ಸಿಬ್ಬಂದಿಯನ್ನು ಹಾಜರು ಮಾಡಬಹುದು. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳಳಿಗೆ ವೈದ್ಯಕೀಯಚೀಟಿಗಳು ಸರಿಯಾಗಿ ಇಲ್ಲದ ಕಾರಣ ಅದನ್ನು ಸೃಷ್ಟಿ ಮಾಡಿ

ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗಳು C.I. export ನಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 15 ಸಾವಿರ ಸಂಬಳ ಮತ್ತು ಟೈಲರಿಂಗ್ ನಿಂದ 8 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸುವ ದಾಖಲೆಗಳು ಇಲ್ಲ. ನಾನು ಟ್ಯಾಕ್ಸಿಗೆ 3500 ರಂತೆ ಈ ಸಂಬಂದ 50 ಸಾವಿರ ಖರ್ಚು ಮಾಡಿರುತ್ತೇನೆ ಎಂದು ತೋರಿಸುವ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತೆ ನನ್ನ ಮಗಳಿಗೆ ಆದಾಯ ಇರಲಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗಳು ಪಿ.ಯು.ಸಿ.ವರೆಗೆ ವಿದ್ಯಾಭಾಸ ಮಾಡಿದ್ದಳು. ನನ್ನ ಮಗಳ ವಯಸ್ಸನ್ನು ತೋರಿಸುವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಮ್ಮ ಮನೆಯಲ್ಲಿ ನಾನು, ಮೃತ ಮತ್ತು ಇನ್ನೊಬ್ಬ ಮಗಳು ವಾಸ ಮಾಡುತ್ತಿದ್ದೆವು. ನಮ್ಮ ಬಳಿ ಪಡಿತರ ಚೀಟಿ ಇರುತ್ತದೆ, ಮೃತಳಿಗೆ ಸಂಬಂಧಪಟ್ಟ ಪಡಿತರ ಚೀಟಿ ಬೇರೆ ಇರುತ್ತದೆ. ನನ್ನ ಪಡಿತರ ಚೀಟಿಯಲ್ಲಿ ನನ್ನ ಒಬ್ಬಳ ಹೆಸರು ಮಾತ್ರ ಇರುತ್ತದೆ. ಮೃತಳ ಪಡಿತರ ಚೀಟಿಯಲ್ಲಿ ಆಕೆಯ ಹೆಸರು ಮತ್ತು ಆಕೆಯ ಮಗಳ ಹೆಸರು ಇರುತ್ತದೆ. ನಾನು ಮತ್ತು ನನ್ನ ಮಗಳು ಒಟ್ಟಿಗೆ ವಾಸ ಮಾಡುತ್ತಿರಲಿಲ್ಲಾ ಆದ್ದರಿಂದ ಬೇರೆ ಬೇರೆ ಪಡಿತರ ಚೀಟಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ನನ್ನ ಮಗಳ ಗಂಡ ಸತ್ತ ನಂತರ ಆಕೆ ನಮ್ಮ ಜೊತೆ ವಾಸ ಮಾಡುತ್ತಿದ್ದಳು. ನನ್ನ ಮಗಳಿಗೆ ವಿಧವಾ ವೇತನ ಬರುತ್ತಿತ್ತು ಎಂದರೆ ಸರಿ . ನನಗೂ ಸಹ ತಿಂಗಳಿಗೆ 800 ವಿಧವಾ ವೇತನ ಬರುತ್ತದೆ. ನನಗೆ ಒಟ್ಟು 5 ಜನ ಮಕ್ಕಳು ಅದರಲ್ಲಿ ಒಬ್ಬ ಮಗ ಇದ್ದು ಆತ ತೀರಿ ಹೋಗಿರುತ್ತಾನೆ, ಇನ್ನು

ಪಿ.ಡಬ್ಲ್ಯೂ **–1**

ನಾಲ್ಕು ಜನ ಹೆಣ್ಣು ಮಕ್ಕಳು. ಮೃತಳು ನನ್ನ ಆದಾಯದ ಮೇಲೆ ಅವಲಂಭಿರಾಗಿದ್ದರು ಎಂದರೆ ಸರಿ. ಆದ್ದರಿಂದ ಮೃತಳ ಸಾವಿನಿಂದ ನನಗೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಮಗಳು ಹೋಗುತ್ತಿದ್ದ ಮೋಟಾರ್ ಸೈಕಲ್ ಸವಾರನ ತಪ್ಪಿನಿಂದ ಆಗಿರುವುದರಿಂದ 2 ನೇ ಎದುರುದಾಗ ಪರಿಹಾರ ನೀಡಲು ಬದ್ದರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು